ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/35/ಎಲ್ಆರ್ಡಿಸಿ/2014-15

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ
ಬೆಂಗಳೂರು-560001
ದಿನಾಂಕ: 23-7-2015

# ಜ್ಞಾಪನ

**ವಿಷಯ: ರಾಜ್ಯದಲ್ಲಿನ ಐದು ವರ್ಷ ಪೂರೈಸಿದ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ತಾಂತ್ರಿಕ ಸಂಸ್ಥೆಗಳ ಪ್ರೋಗ್ರಾಮಗಳನ್ನು ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತೆ ಪಡೆಯುವ ಕುರಿತು**

ರಾಜ್ಯದಲ್ಲಿನ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡಿ ಕುಶಲತೆಯುಳ್ಳ ಕಾರ್ಯಪಡೆಯನ್ನು ತಯಾರಿಸಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ನಿಟ್ಟಿನಲ್ಲಿ ಕ್ರಮ ಜರೂಗಿಸುವಂತೆ ಸೂಚಿಸಿರುತ್ತಾರೆ. ಅದರಂತೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಫಲಿತಾಂಶ ಆಧಾರಿತ ಪಠ್ಯಕ್ರಮವನ್ನು ಎಲ್ಲಾ ಡಿಪ್ಲೊಮ ಸಂಸ್ಥೆಗಳಲ್ಲಿ 2014-15ನೇ ಸಾಲಿನಿಂದ ಅಳವಡಿಸಲಾಗಿರುತ್ತದೆ. ಮುಂದುವರೆದು, ಐದು ವರ್ಷ ಪೂರ್ಣಗೊಳಿಸಿದ ತಾಂತ್ರಿಕ ಸಂಸ್ಥೆಗಳು ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ **(National Board of Accreditation-NBA)** ತಮ್ಮ ತಮ್ಮ ಸಂಸ್ಥೆಯಲ್ಲಿನ ಪ್ರತಿಯೊಂದು ಪ್ರೋಗ್ರಾಮಗಳಿಗೆ (ವಿಭಾಗ) ಮಾನ್ಯತೆ ಪಡೆಯುವುದು ಅನಿವಾರ್ಯವಾಗಿರುತ್ತದೆ. ಅಲ್ಲದೇ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಮತ್ತು ಭಾರತ ಸರ್ಕಾರದ ಯಾವುದೇ ಅನುದಾನ, ಧನಸಹಾಯ ಬೇಕಾದಲ್ಲಿ ಎನ್‌ಬಿಎ ಯಿಂದ ಮಾನ್ಯತೆ ಪಡೆದ ಸಂಸ್ಥೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ಇಲಾಖೆಯ ವ್ಯಾಪ್ತಿಗೆ ಬರುವ ತಾಂತ್ರಿಕ ಸಂಸ್ಥೆಗಳಲ್ಲಿನ ಪ್ರೋಗ್ರಾಮಗಳಿಗೆ ಮಾನ್ಯತೆ ನೀಡುವ ನಿಟ್ಟಿನಲ್ಲಿ ಸಲಹೆ ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡುವ ಒಂದು ರಾಜ್ಯಮಟ್ಟದ ಸಮಿತಿಯ ಅವಶ್ಯಕತೆ ಕಂಡುಬಂದಿರುತ್ತದೆ. ಅದರಂತೆ ಈ ಕೆಳಕಂಡ ರಾಜ್ಯಮಟ್ಟದ ಸಮಿತಿಯನ್ನು ರಚಿಸಲಾಗಿರುತ್ತದೆ.

**ಶ್ರೀಯುತರಾದ**

| | | |
|---|---|---|
| 1 | **ಹೆಚ್. ಯು. ತಳವಾರ,**<br>ನಿರ್ದೇಶಕರು, ತಾ.ಶಿ.ನಿ., ಬೆಂಗಳೂರು | ಅಧ್ಯಕ್ಷರು |
| 2 | **ಆರ್. ಮಂಜುನಾಥ**<br>ಜಂಟಿ ನಿರ್ದೇಶಕರು, ತಾ.ಶಿ.ನಿ., ಬೆಂಗಳೂರು | ಉಪಾಧ್ಯಕ್ಷರು |
| 3 | **ಎಂ. ಜಿ. ನಾಯಕ**<br>ವಿಶೇಷಾಧಿಕಾರಿ, ಟೆಕ್ವಿಪ್, ತಾ.ಶಿ.ನಿ., ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| 4 | ಟೆಕ್ವಿಪ್-1, ಬೆಂಗಳೂರು | ಸದಸ್ಯರು |
| 5 | ಟೆಕ್ವಿಪ್-2, ಕಲಬುರಗಿ | ಸದಸ್ಯರು |
| 6 | ಟೆಕ್ವಿಪ್-3, ಹುಬ್ಬಳ್ಳಿ | ಸದಸ್ಯರು |

| | | |
|---|---|---|
| 7 | ಟೆಕ್ವಿಪ್-4, ಮೈಸೂರು | ಸದಸ್ಯರು |
| 8 | **ಡಾ॥ ಕರಿಸಿದ್ದಪ್ಪ**, ಪ್ರಾಂಶುಪಾಲರು, ಸ.ಇ.ಕಾಲೇಜು, ಹಾಸನ | ಸದಸ್ಯರು |
| 9 | **ಜಿ. ಬಿ. ದಾನಶೆಟ್ಟಿ**, ಪ್ರಾಂಶುಪಾಲರು, ಬಿ.ವಿ.ವಿ.ಎಸ್. ಪಾಲಿಟೆಕ್ನಿಕ್, ಬಾಗಲಕೋಟೆ | ಸದಸ್ಯರು |
| 10 | **ಅರವಿಂದ ಕುಲಕರ್ಣಿ**, ನಿವೃತ್ತ ಪ್ರಾಂಶುಪಾಲರು, ಕೆ.ಹೆಚ್.ಕೆ.ಐ.ಟಿ (ಪಾಲಿಟೆಕ್ನಿಕ್), ಧಾರವಾಡ | ಸದಸ್ಯರು |
| 11 | **ಸತೀಶ ರ. ಹುದ್ದಾರ**, ಉಪ ನಿರ್ದೇಶಕರು (ಸಾಂಖ್ಯಿಕ), ತಾ.ಶಿ.ನಿ, ಬೆಂಗಳೂರು | ಸದಸ್ಯರು |
| 12 | **ಡಿ. ಹೆಚ್. ಜಗದೀಶ**, ಅಭಿವೃದ್ಧಿ ಅಧಿಕಾರಿಗಳು, ತಾ.ಶಿ.ನಿ., ಬೆಂಗಳೂರು | ಸದಸ್ಯರು |
| 13 | **ಸಲ್ವದೋರ್ ಡಿ. ಗೊನ್ಸಾಲ್ವಿಸ್**, ಅಭಿವೃದ್ಧಿ ಅಧಿಕಾರಿಗಳು, ತಾ.ಶಿ.ನಿ., ಬೆಂಗಳೂರು | ಸದಸ್ಯರು |

ನಿರ್ದೇಶಕರು

ಇವರಿಗೆ:

1. ಮೇಲಿನ ಎಲ್ಲಾ ಸಮಿತಿ ಸದಸ್ಯರುಗಳ ಮಾಹಿತಿಗಾಗಿ